# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂ.ಅ.ಪ್ರಾ/ಅಸ/ಅಅ-3/ತಾಸ-4/ಪ್ರಾಪ್ರ.ಪ/ಟಿ- 277/2019-20 ದಿನಾಂಕ : 10-10-2019
No. Date :

ಅನುಸೂಚಿ-7
(ಉಪವಿಧಿ ಸಂಖ್ಯೆ: 5.3)
**ಪ್ರಾರಂಭಿಕ ಪ್ರಮಾಣ ಪತ್ರ**

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

**ಇವರಿಗೆ,**

ಶ್ರೀ ಜಿ. ಕೃಷ್ಣಪ್ಪ ಮತ್ತು ಇತರರು,
ಜಿ.ಪಿ.ಎ. ಮತ್ತು ಜೆ.ಡಿ.ಎ. ದಾರರಾದ ಮೆ॥ ಸಪ್ತಗಿರಿ ಮಹರ್ಷಿ ಬಿಲ್ಡರ್ಸ್,
ವ್ಯವಸ್ಥಾಪಕ ಪಾಲುದಾರರಾದ ಶ್ರೀ ಹೆಚ್. ರವೀಂದ್ರ ಮತ್ತು ವಾಸುದೇವರೆಡ್ಡಿ,
#ಬಿ1, ಸಪ್ತಗಿರಿ ಮಹರ್ಷಿ ನಿಲಯ ಅಪಾರ್ಟ್‌ಮೆಂಟ್,
ಬೆಂಗಳೂರು.

**ಮಾನ್ಯರೆ,**

**ವಿಷಯ:** ಕಾಮಗಾರಿಯ ಆರಂಭದ ಬಗ್ಗೆ **ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬಿದರೇ ಅಗ್ರಹಾರ ಗ್ರಾಮದ ಸರ್ವೆ ನಂ. 19/2 ರಲ್ಲಿ ನಿರ್ಮಿಸುತ್ತಿರುವ ತಳ+ನೆಲ+04 ಮೇಲಂತಸ್ತುಗಳನ್ನೊಳಗೊಂಡ ಒಟ್ಟು 60 ಘಟಕಗಳು ಹಾಗೂ ನೆಲ ಅಂತಸ್ತಿನಲ್ಲಿ ಕ್ಲಬ್‌ಹೌಸ್ ಒಳಗೊಂಡಂತೆ "ಬಹುವಸತಿ" ಕಟ್ಟಡಕ್ಕೆ** ಅನುಮತಿ ನೀಡುವ ಕುರಿತು.

**ಉಲ್ಲೇಖ:**
1. ಮಂಜೂರಾತಿಯಾದ ನಕ್ಷೆ ಸಂಖ್ಯೆ: **ಬೆಂ.ಅ.ಪ್ರಾ/ನಮ/ಅಸ/ಅಅ-3/ತಾಸ-4/ ಪೂ/18/2017-18, ದಿನಾಂಕ: 26.07.2017.**
2. ನಿಮ್ಮ ಅರ್ಜಿ ದಿನಾಂಕ: 25.03.2019.
3. ಮಾನ್ಯ ಆಯುಕ್ತರು ರವರ ಆದೇಶ ಸಂಖ್ಯೆ: **2050**, ದಿನಾಂಕ: **06.09.2019.**

********

**ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬಿದರೇ ಅಗ್ರಹಾರ ಗ್ರಾಮದ ಸರ್ವೆ ನಂ. 19/2 ರಲ್ಲಿ ತಳ+ನೆಲ+04 ಮೇಲಂತಸ್ತುಗಳನ್ನೊಳಗೊಂಡ ಒಟ್ಟು 60 ಘಟಕಗಳು ಹಾಗೂ ನೆಲ ಅಂತಸ್ತಿನಲ್ಲಿ ಕ್ಲಬ್‌ಹೌಸ್ ಒಳಗೊಂಡಂತೆ "ಬಹುವಸತಿ" ಕಟ್ಟಡವನ್ನು** ನಿರ್ಮಿಸಲು ಕಟ್ಟಡದ ನಕ್ಷೆಗೆ ಎಲ್.ಪಿ. ಸಂಖ್ಯೆ: **ಬೆಂ.ಅ.ಪ್ರಾ/ನಮ/ಅಸ/ಅಅ-3/ತಾಸ-4/ಪೂ/18/2017-18, ದಿನಾಂಕ: 26.07.2017** ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾತಿ ನೀಡಲಾಗಿದೆ. ಮುಂದುವರೆದಂತೆ ಉಲ್ಲೇಖ (2) ರ ಅರ್ಜಿಯಂತೆ **ಸದರಿ ಸ್ಥಳದಲ್ಲಿ ತಳ+ನೆಲ+04 ಮೇಲಂತಸ್ತುಗಳ "ಬಹುವಸತಿ" ಕಟ್ಟಡಕ್ಕೆ** ಪ್ರಾಧಿಕಾರದಿಂದ ಉಲ್ಲೇಖ (1) ರಲ್ಲಿ ನೀಡಲಾಗಿರುವ ಮಂಜೂರಾತಿಯಂತೆ, ಸದರಿ ಕಟ್ಟಡದ ಆವರಣವನ್ನು ಕಾರ್ಯಪಾಲಕ ಅಭಿಯಂತರರು (ಪೂರ್ವ) ರವರು ದಿನಾಂಕ: **03.07.2019** ರಂದು ತನಿಖೆ ನಡೆಸಲಾಗಿ ಮತ್ತು ಗುರುತು ಮಾಡಿ ನಿರ್ಮಿಸಿದ ಅಡಿಪಾಯವನ್ನು ಗುರುತು ಮಾಡಿದ, ಕೂಡಿಸಿದ ಅಂಕಣವನ್ನು ಹೋಲಿಸಿ ಪರಿವೀಕ್ಷಿಸಿ ಕಾಮಗಾರಿ ಕೆಲಸ ಪ್ರಾರಂಭಿಸಿರುವ **"ಬಹುವಸತಿ"** ಕಟ್ಟಡದ ಕಾಮಗಾರಿಯು ಮಂಜೂರಾದ ನಕ್ಷೆಯ ಮೇರೆಗೆ ಇರುವುದಾಗಿ ವರದಿ ನೀಡಿರುತ್ತಾರೆ.

**ಆಯುಕ್ತರ ಪರವಾಗಿ,**
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಪುಟ ಸಂಖ್ಯೆ (2) ಕ್ಕೆ ಮುಂದುವರೆದಿದೆ....

**ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು 560 020**
T. Chowdaiah Road, Kumarapark West, Bangalore 560 020, Facsimile : 2334 5799, Website : www.bdabangalore.org

ಪ್ರಸ್ತಾವನೆಯನ್ನು ಆಯುಕ್ತರವರಿಗೆ ಸಲ್ಲಿಸಲಾಗಿದ್ದು, ಆಯುಕ್ತರವರ ಆದೇಶ ಸಂಖ್ಯೆ: 2050, ದಿನಾಂಕ: 06.09.2019 ರಂದು ಮೇಲ್ಕಂಡ **ತಳ+ನೆಲ+04 ಮೇಲಂತಸ್ತುಗಳನ್ನೊಳಗೊಂಡ ಒಟ್ಟು 60 ಘಟಕಗಳು ಹಾಗೂ ನೆಲ ಅಂತಸ್ತಿನಲ್ಲಿ ಕ್ಲಬ್‌ಹೌಸ್ ಒಳಗೊಂಡಂತೆ "ಬಹುವಸತಿ" ಕಟ್ಟಡಕ್ಕೆ** ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಅನುಮೋದನೆ ನೀಡಿರುತ್ತಾರೆ. ಅದರಂತೆ, ಅರ್ಜಿದಾರರು ಚಲನ್ ಸಂಖ್ಯೆ: **5136,** ದಿನಾಂಕ: **30.09.2019** ರಂದು ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಶುಲ್ಕವಾದ ರೂ. **71,846/-** ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತೀರ. ಅದರಂತೆ ಸದರಿ **"ಬಹುವಸತಿ"** ಕಟ್ಟಡದ ಕಾಮಗಾರಿಯನ್ನು ಮುಂದುವರೆಸಲು ಈ ಕೆಳಕಂಡ ಷರತ್ತುಗೊಳಪಡಿಸಿ ಅನುಮತಿ ನೀಡಿದೆ.

1. ಕಾಮಗಾರಿಯಲ್ಲಿ ಯಾವುದೇ ಮಿತಿಮೀರುವಿಕೆ, ಬದಲಾವಣೆಗಳನ್ನು ಮಾಡದೆ ಅಥವಾ ನಿಯಮ ಉಪವಿಧಿಯನ್ನು ಉಲ್ಲಂಘಿಸದಂತೆ ಮಂಜೂರಾದ ಯೋಜನೆಯ ಪ್ರಕಾರ ಕಟ್ಟು ನಿಟ್ಟಾಗಿ ಕಾಮಗಾರಿಯನ್ನು ನಡೆಸತಕ್ಕದ್ದು.
2. ಕಾಮಗಾರಿಯು, ಅಂಕಣಗಳನ್ನು ಮಾಡಿಸುವ ಕಾರ್ಯ ಮುಕ್ತಾಯವಾದ ಹಂತವನ್ನು ತಲುಪಿದಾಗ, ಕಾಮಗಾರಿಯ ಪ್ರಗತಿಯ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸುವ ಮೂಲಕ ಮಂಜೂರಾದ ನಕ್ಷೆ, ನಿಯಮಗಳು ಉಪವಿಧಿಗಳ ಮೇರೆಗೆ ನಿರ್ಮಾಣ ಕಾರ್ಯವು ನಡೆದಿರುವ ಬಗ್ಗೆ ಪರೀಕ್ಷೆ ನಡೆಸಲು ಪ್ರಾಧಿಕಾರಕ್ಕೆ ಅನುಕೂಲ ಕಲ್ಪಿಸಿ ಕೊಡಬೇಕು.
3. ನಕ್ಷೆ ಮಂಜೂರಾತಿಯಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ತಪ್ಪಿದ್ದಲ್ಲಿ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ರದ್ದು ಪಡಿಸುವುದಲ್ಲದೇ ಸ್ವಾಧೀನಾನುಭವ ಪತ್ರವನ್ನು ನೀಡಲಾಗುವುದಿಲ್ಲ.

**ಆಯುಕ್ತರ ಪರವಾಗಿ,**
**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**
**ಬೆಂಗಳೂರು**

ಪ್ರತಿಯನ್ನು:-

- ಕಾರ್ಯಪಾಲಕ ಅಭಿಯಂತರರು (ಪೂ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.